**ಸಾಕ್ಷಿಯನ್ನ ದಿನಾಂಕ 21-09-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ 1 ನೇ ಆರೋಪಿ ಪರ** ವಕೀಲರಾದ ಶ್ರೀ ಆರ್. ಕೆ. ಹಿರೇಮಠರವರಿಂದ.

ತನಿಖಾಧಿಕಾರಿಯು ಆರೋಪಿಗಳ ಒಪ್ಪಿತ ಕ್ಯೂ-1, ಕ್ಯೂ-2, ಎ-1, ಎ-2 ಬೆರಳಿನ ಮುದ್ರೆಗಳನ್ನ ನನಗೆ ಕಳುಹಿಸಿರುತ್ತಾರೆ. ನಮೂನೆ ಸಂಖ್ಯೆ 2-14 ರಲ್ಲಿ ತನಿಖಾಧಿಕಾರಿ ಕಳುಹಿಸಿದ್ದ ಎ-1 ರಿಂದ ಎ-3 ಮತ್ತು ಕ್ಯೂ-1 ಮತ್ತು ಕ್ಯೂ-2 ಒಪ್ಪಿತ ಬೆರಳು ಮುದ್ರೆಗಳು. ಎ-1 ರಿಂದ ಎ-3, ಕ್ಯೂ-1 ಮತ್ತು ಕ್ಯೂ-2 ನ್ನ ತನಿಖಾಧಿಕಾರಿಯು ಯಾವ ದಿನಾಂಕದಂದು ಪಡೆದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಕ್ಯೂ-1 ಮತ್ತು ಕ್ಯೂ-2 ಬೆರಳು ಮುದ್ರೆಗಳು ದಿನಾಂಕ 18-08-2009 ರಂದು ಜೇವರ್ಗಿಯ ಕಂದಾಯ ನೀರಿಕ್ಷಕರ ಮುಂದೆ ನೀಡಿದ ಹೇಳಿಕೆ ಪತ್ರದಲ್ಲಿರುತ್ತದೆ (ನಿಪಿ-19). ನಿಪಿ-19 ರಲ್ಲಿರುವ ಕ್ಯೂ-1 ಮತ್ತು ಕ್ಯೂ-2 ಬೆರಳು ಮುದ್ರೆಗಳು ಒಪ್ಪಿತ ಬೆರಳು ಮುದ್ರೆಗಳಲ್ಲ ಎಂದರೆ ಸಾಕ್ಷಿ ಸದರಿ ಬೆರಳು ಮುದ್ರೆಗಳನ್ನ ಒಪ್ಪಿತ ಬೆರಳು ಮುದ್ರೆಗಳು ಎಂದು ತನಿಖಾಧಿಕಾರಿ ಕಳುಹಿಸಿದ್ದಾರೆ ಎಂದು ಹೇಳುತ್ತಾರೆ.

ಡಿ-1 ಮತ್ತು ಡಿ-2 ರ ಪ್ರಕಾರ ನಾನು ಗುರತಿಸಿರುವ ಬೆರಳು ಮುದ್ರೆಗಳು ವಿವಾದಿತ ಬೆರಳು ಮುದ್ರೆಗಳು. ಅವುಗಳು ದಿನಾಂಕ 12-08-2006 ರ ರೂ.20/- ಛಾಪಾ ಕಾಗದದ ಒಪ್ಪಿಗೆ ಪ್ರಮಾಣ ಪತ್ರದ ಮೇಲೆ ಇರುತ್ತವೆ (ನಿಪಿ-8). ಅವುಗಳನ್ನ ದಿನಾಂಕ 19-10-2011 ರಂದು ಅವುಗಳನ್ನ ಪರೀಕ್ಷಿಸಿರುತ್ತೇನೆ. ಸಾಮಾನ್ಯವಾಗಿ ಗಾರೆ ಕೆಲಸ ಮಾಡುವವರು, ಹೊಲದಲ್ಲಿ ಕೆಲಸ ಮಾಡುವ ರೈತರ ಅಂಗೈಗಳು ವರಟಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. 3-4 ವರ್ಷಗಳ ಅವಧಿಯಲ್ಲಿ ಕೈಯಲ್ಲಿ ಕೆಲಸ ಮಾಡುವ ವ್ಯಕ್ತಿಗಳ ಬೆರಳಿನ ರೇಖೆಗಳು ಬದಲಾವಣೆ ಆಗುತ್ತವೆ ಎಂದರೆ ಸರಿಯಲ್ಲ. ವರಟಾಗಿರುವ ವ್ಯಕ್ತಿಗಳ ಅಂಗೈಯಲ್ಲಿನ ರೇಖೆಗಳನ್ನ ಗುರುತಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ವಿವಾದಿತ ಮತ್ತು ಒಪ್ಪಿತ ಬೆರಳು ಮುದ್ರೆಗಳನ್ನ ಗ್ಯಾಲ್ಟನ್ ವಿಧಾನದ ಮೂಲಕ ಪರೀಕ್ಷೆ ಮಾಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ವಿವಾದಿತ ಬೆರಳು ಮುದ್ರೆಯು ಎ-3 ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ಯೂ-1 ವಿವಾದಿತ ಬೆರಳು ಮುದ್ರೆಯು ಎ-1 ಒಪ್ಪಿತ ಬೆರಳು ಮುದ್ರೆಗೆ ಹೊಂದಾಣಿಕೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ-1 ವಿವಾದಿತ ಬೆರಳು ಮುದ್ರೆಯು ಕ್ಯೂ-1 ಒಪ್ಪಿತ ಬೆರಳು ಮುದ್ರೆಯೊಂದಿಗೆ ಮತ್ತು ಎ-1 ಹಾಗೂ ಎ-2 ಒಪ್ಪಿತ ಬೆರಳು ಮುದ್ರೆಗಳೊಂದಿಗೆ ಹೊಂದಾಣಿಕೆ ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಯಾವುದೇ ವೈಜ್ಞಾನಿಕ ಕಾರಣಗಳಿಲ್ಲದೆ ನಿಪಿ-60 ವರದಿಯನ್ನ ನಿಡಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಮಾತು ಕೇಳಿ ನಿಪಿ-60 ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ** ವಕೀಲರಾದ ಶ್ರೀ ಬಿ. ಬಸ್ಸಣ್ಣರವರಿಂದ

(2 ನೇ ಆರೋಪಿಯ ವಿರುದ್ಧದ ಪ್ರಕರಣರಕ್ಕೆ ಗೌರವಾನಿತ್ವ ಉಚ್ಚ ನ್ಯಾಯಾಲಯದಿಂದ ತಡೆ ಇರುವುದರಿಂದ 2 ನೇ ಆರೋಪಿ ಪರ ಸಾಕ್ಷಿ ಪಾಟೀ ಸವಾಲನ್ನ ಮೂಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**